ಶ್ರೀ ಎ. ಲಕ್ಷ್ಮಿಸಾಗರ್.—ಹುಡ್ಕೋ ನೆರವನ್ನು ಕೋರಿ ಫೆಬ್ರುವರಿ 1982ರಲ್ಲಿ ಅವರಿಗೆ ಕಳುಹಿಸಿ ಕೊಡಲಾಗಿತ್ತು. ಅದಾದನಂತರ ಅಲ್ಪಾದಾಯದ ಮನೆಗಳ ಬೆಲೆ ಚಾಸ್ತಿಯಾಗುತ್ತದೆ, ಅದನ್ನು ಕಡಿಮೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಅದರಂತೆ ಅಂದಾಜುಗಳನ್ನು ಮಾಡಬೇಕೆಂದು ಅವರು ನಮಗೆ ವಾಪಸ್ ಹಾಕಿದ್ದರಿಂದ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕಾಗಲಿಲ್ಲ. ಮಧ್ಯಮ ಆದಾಯದ ಮನೆಗಳಿಗೆ ಹುಡ್ಕೋ ಮಂಜೂರಾತಿ ದಿನಾಂಕ 4-4-1980ರಲ್ಲಿ ಸಿಕ್ಕಿದೆ. ಈ ರೀತಿ ರೀಕಾಸ್ಟ್ ಮಾಡಿ ಪ್ಲಾನ್ ಕೊಡಿ ಎಂದು ಹೇಳಿದ್ದಕ್ಕೋಸ್ಕರ ವಿಳಂಬವಾಗಿದೆ.

ಶ್ರೀ ಕೆ. ರಾಮಭಟ್.—'ಇ' ಪ್ರಶ್ನೆಗೆ ಉತ್ತರವಾಗಿ ಅಲ್ಪ ಆದಾಯದವರಿಗೆ ಮನೆ ನಿರ್ಮಾಣದ ಬಗ್ಗೆ ಇನ್ನೂ ಪರಿಶೀಲನೆ ನಡೆಯುತ್ತಿದೆ ಎಂದು ಹೇಳಿದ್ದೀರಿ. ಪರಿಶೀಲನೆ ಯಾವ ಹಂತದಲ್ಲಿದೆ, ಯಾವಾಗ ಮುಗಿಯುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಲಕ್ಷ್ಮಿಸಾಗರ್.—ಬೇಗ ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಹಣ ಜಾಸ್ತಿ ಖರ್ಚಾಗುತ್ತದೆ, ಅಂತಿಮ ಬೆಲೆ ಕಡಿಮೆ ಮಾಡಬೇಕು, ಅದರಂತೆ ಸ್ಕೀಂ ಕಳುಹಿಸಿ ಎಂದು ಹುಡ್ಕೋದವರು ಹೇಳಿದ್ದಾರೆ, ಅವರಿಂದ ಹಣ ಬಂದವಂತರ ಮಾಡುತ್ತೇವೆ.

ವಿಷಯ :- ಬೆಂಗಳೂರಿನ ಸಾರಿಗೆ ಸೇವಾ ವ್ಯವಸ್ಥೆಯನ್ನು ಉತ್ತಮಪಡಿಸುವುದು

ಪ್ರ. 161 (110) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ) ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಬೆಂಗಳೂರು ನಗರದ ಸಾರಿಗೆ ವ್ಯವಸ್ಥೆಯನ್ನು ಉತ್ತಮ ಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು;

ಆ. ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸಲು ಮತ್ತು ಬದಲಿ ವ್ಯವಸ್ಥೆ ಬಗ್ಗೆ ಸರ್ಕಾರದವರು ರಚಿಸಿದ ಸಮಿತಿಯ ಸಮೀಕ್ಷೆ ವರದಿ ಬಂದಿದೆಯೇ;

ಇ. ಈ ಸಮೀಕ್ಷೆ ವರದಿಯ ಶಿಫಾರಸ್ಸುಗಳೇನು ?

ಶ್ರೀ ಎಂ. ಪಿ. ಪ್ರಕಾಶ್, (ಮಾನ್ಯ ಸಾರಿಗೆ ರಾಜ್ಯ ಸಚಿವರು) :—

ಅ. ರಾಜ್ಯ ಸಾರಿಗೆ ಸಂಸ್ಥೆಯು ಬೆಂಗಳೂರು ನಗರ ಸಾರಿಗೆ ವಿಭಾಗಕ್ಕೆ ಒದಗಿಸುವ ಬಸ್ಸುಗಳನ್ನು 1980-81ರಲ್ಲಿ 656 ಬಸ್ಸುಗಳಿಂದ 1981-82ರಲ್ಲಿ 904ಕ್ಕೆ ಹೆಚ್ಚಿಸಿವೆ. 1983-84ರ ಯೋಜನೆಯಲ್ಲಿ 212 ಬಸ್ಸುಗಳನ್ನು ಈ ವಿಭಾಗಕ್ಕೆ ಹೆಚ್ಚಿಗೆ ಸೇರಿಸುವ ಯೋಜನೆಯು ಸೇರಿದೆ,

ಆ. ಬಂದಿದೆ.

ಇ. 1. ಈ ಸಮೀಕ್ಷಾ ಸಮಿತಿಯ ವರದಿಯಲ್ಲಿ ಮುಂದಿನ 20 ವರ್ಷಗಳಿಗೆ ಅವಶ್ಯಕವಿರುವ ಸಾರಿಗೆ ವ್ಯವಸ್ಥೆಗಾಗಿ ಯೋಜನೆಯೊಂದನ್ನು ರೂಪಿಸಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಕ್ರಿ. ಶ. 2000ರ ಇಸವಿಯ ಹೊತ್ತಿಗೆ 117.66 ಕೋಟಿ ರೂಗಳ ವೆಚ್ಚದಲ್ಲಿ 3000 ಷೆಡ್ಯೂಲ್‌ಗಳನ್ನು ಹೊಂದುವ ಯೋಜನೆಯೊಂದಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸಲು ನಿರ್ಧರಿಸಿದೆ.

2. ಒಳವೃತ್ತಗಳು, ಪಾದಚಾರಿಗಳು ಸಂಚರಿಸುವ ಉಪ ಮಾರ್ಗಗಳನ್ನು ಈಗಿರುವ ಮಾರ್ಗಗಳಿಂದ ಬೇರ್ಪಡಿಸುವಿಕೆಗೆ ಇತರೆ ಖರ್ಚುಗಳಿಗಾಗಿ 120 ಕೋಟಿ ರೂಗಳ ಅಂದಾಜು ಮಾಡಲಾಗಿದೆ.

3. ವೃತ್ತಾಕಾರದ ರಸ್ತೆಗಳು ಸುರಂಗ ರೈಲ್ವೆ ಮಾರ್ಗಗಳು, ಇತರೆ ಮಾರ್ಗಗಳನ್ನು ನಿರ್ಮಿಸಲು ಯೋಚಿಸಲಾಗಿದೆ.

4. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೆಂಗಳೂರು ನಗರ ಸಾರಿಗೆಯನ್ನು ಬೇರ್ಪಡಿಸಿ ಇದಕ್ಕಾಗುವ ವೆಚ್ಚವನ್ನು ಸಹಾಯ ಧನವೆಂದು ಸರ್ಕಾರ ಬಿ. ಡಿ. ಎ, ಮತ್ತು ಬ, ಸಿ. ಸಿ. ಗಳಿಂದ ಪಡೆಯುವಂತೆ ಮಾಡುವುದು.

5. ವಿಶ್ವ ಬ್ಯಾಂಕಿನಿಂದ ನಿಧಿಯ ನೆರವನ್ನು ಪಡೆಯಲು ಪ್ರಯತ್ನ ಮಾಡುವುದು.

ಶ್ರೀ ಪಿ. ರಾಮದೇವ್.—ಇದರಲ್ಲಿ ಎರಡು ವಿಚಾರಗಳಿವೆ. ಮೊದಲನೆಯದಾಗಿ, ರಷ್ ಅವರ್‌ಗಳಲ್ಲಿ ಬಸ್ಸುಗಳ ತೂಂದರೆಯನ್ನು ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೂಂಡು ಹೆಚ್ಚಿನ ಸೌಲಭ್ಯವನ್ನೊದಗಿಸಲು ಬೆಂಗಳೂರು ನಗರ ಸಾರಿಗೆಯವರು ಏನು ಮಾಡಿದ್ದಾರೆ ? ಇದಕ್ಕೆ ಕೇಂದ್ರಸರ್ಕಾರ ಮತ್ತು ಯೋಜನಾ ಆಯೋಗದಿಂದ ಹಣ ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೀರಾ;

ಶ್ರೀ ಎಂ. ಪಿ. ಪ್ರಕಾಶ್,—ಸನ್ಮಾನ್ಯ ಅಧ್ಯಕ್ಷರೆ, ಹೆಚ್ಚಿನ ಜನಸಾಂದ್ರತೆ ಮತ್ತು ಒತ್ತಡ ಇರತಕ್ಕ ಕಡೆಗಳಲ್ಲಿ ಫ್ಯಾಕ್ಟರಿಗಾಗಿ ಕೊಟ್ಟಿರತಕ್ಕ ಬಸ್ಸುಗಳನ್ನು ಮತ್ತೆ ಹಾಕಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಈ ವರ್ಷದಲ್ಲಿ 200 ಹೊಸ ಬಸ್ಸುಗಳನ್ನು ಹಾಕುವ ಯೋಚನೆ ಇದೆ. ಯೋಜನಾ ಆಯೋ

ಗಕ್ಕೆ ಸಿದ್ಧಪಡಿಸಿದ ವರದಿ ಜೊತೆಗೆ ಸುಮಾರು 300 ಕೋಟಿ ರೂಪಾಯಿಗಳ ಅಂದಾಜು ಕಳುಹಿಸಿದ್ದೇವೆ. ಹೊಸ ಬಸ್ಸುಗಳಿಗಾಗಿ 170 ಕೋಟಿ ರೂಪಾಯಿಗಳು, ಮಾರ್ಗಗಳನ್ನು ವಿಸ್ತರಿಸುವುದಕ್ಕೆ, ವೃತ್ತಾಕಾರದ ಮಾರ್ಗಗಳನ್ನು ಮತ್ತು ಸುರಂಗ ಮಾರ್ಗಗಳನ್ನು ಮಾಡುವುದಕ್ಕೆ 120 ಕೋಟಿ ರೂಪಾಯಿಗಳ ಅಂದಾಜು ಮಾಡಲಾಗಿದೆ.

ವಿಷಯ :—ಬಳ್ಳಾರಿಯಲ್ಲಿ ಮನೆಗಳು ಹಾಗೂ ಕಟ್ಟಡಗಳ ಅಭಾವ

ಪ್ರ. 162 (108) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಬಳ್ಳಾರಿಯಲ್ಲಿ ಕಟ್ಟಡ ಮತ್ತು ಮನೆಗಳ ತೀವ್ರ ಕೊರತೆ ಇರುವುದು ಸರಕಾರಕ್ಕೆ ಗೊತ್ತಿದೆಯೆ ;

ಆ. ವಿಜಯನಗರ ಉಕ್ಕು ಕಾರ್ಖಾನೆ ಪ್ರಾಧಿಕಾರದ ಬಳ್ಳಾರಿಯಲ್ಲಿ ಯಾವುದೇ ಕಟ್ಟಡ ಚಟುವಟಿಕೆಗೆ ಒಪ್ಪಿಗೆ ಕೊಡಬೇಕು ಎನ್ನುವುದು ನಿಜವೆ ;

ಇ. ಹಾಗಾದರೆ ಒಪ್ಪಿಗೆಗೆ ಬೇಕಾದ ನಿಬಂಧನೆಗಳು ಮತ್ತು ಕಾರಣಗಳು ;

ಈ. ಈ ಕೆಂಪು ಪಟ್ಟಿ ಶಾಹಿಯಿಂದ ಕಟ್ಟಡ ಚಟುವಟಿಕೆ ಸರಿಸುಮಾರು ನಿಲ್ಲುವ ಮಟ್ಟಕ್ಕೆ ಬಂದಿದೆಯೆ ?

ಶ್ರೀ ಎ. ಲಕ್ಷ್ಮಿಸಾಗರ್ (ಮಾನ್ಯ ವಸತಿ ಮಂತ್ರಿಗಳು):—

ಅ. ಬಂದಿದೆ.

ಆ. ಹೌದು.

ಇ. ಕರ್ನಾಟಕ ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ಕಾಯಿದೆಯ ಕಲಮು 17ರಲ್ಲಿ ವಿಧಿಸಿರುವಂತೆ ಯಾವ ಬಡಾವಣೆಯನ್ನೇ ಆಗಲಿ ಯೋಜನೆ ಪ್ರಾಧಿಕಾರದಿಂದ ಮಂಜೂರು ಮಾಡಬೇಕಾಗುತ್ತದೆ. ಬಳ್ಳಾರಿಗೆ ವಿಜಯನಗರ ಉಕ್ಕು ಕಾರ್ಖಾನೆ ಪ್ರಾಧಿಕಾರವು ಯೋಜನಾ ಪ್ರಾಧಿಕಾರವಾಗಿರುತ್ತದೆ. ಭೂಮಿಯ ಉಪಯೋಗವು ಸ್ಥೂಲ ಅಭಿವೃದ್ಧಿ ಯೋಜನೆ ಸಮಗ್ರ ಅಭಿವೃದ್ಧಿ ಯೋಜನೆಯ ಪ್ರಸ್ತಾಪದ ಪ್ರಕಾರ ಇರಬೇಕು.

ಈ. ಇಲ್ಲ.

12 Noon

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಕೊನೇ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಎಂದರೆ ಮನೆ ಕಟ್ಟಡ ಚಟುವಟಿಕೆ ಇಲ್ಲ ಎಂದು ಹೇಳಿದ್ದಾರೆ. 1982-83ರಲ್ಲಿ ಎಷ್ಟು ಮನೆಗಳನ್ನು ಈ ಅಥಾರಿಟಿಯವರಿಂದ ಪಡೆದು ಕಟ್ಟುವುದಕ್ಕೆ ಆಗಿದೆ ಸ್ವಾಮಿ ?

Sri A. Lakshmisagar.—His question is, "Whether Building activity has almost come to the standstill due to this red-tapism ?" to which my answer is 'No'

ಶ್ರೀ ಎಂ.ಎಸ್. ಕೃಷ್ಣನ್.—ನಾನು ಹೇಳುವುದು ಅಲ್ಲಿ ಬಿಲ್ಡಿಂಗ್‌ಗಳನ್ನು ಕಟ್ಟಿರಲೇಬೇಕು. ಹಿಂದಿನ ವರ್ಷ ಎಷ್ಟು ಆಗಿದೆ ಹಾಗೂ ಈ ವರ್ಷ ಎಷ್ಟು ಆಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಆ ಬಗ್ಗೆ ವಿವರ ಇಲ್ಲ. ಆಮೇಲೆ ತರಿಸಿಕೊಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಈಗ ವಿಜಯನಗರ ಉಕ್ಕು ಕಾರ್ಖಾನೆ ಪ್ರಾಧಿಕಾರದಲ್ಲಿ ನಮ್ಮ ಕರ್ನಾಟಕ ರಾಜ್ಯದವರು ಯಾರು ಯಾರು ಇದ್ದಾರೆ ?

Sri A. Lakshmisagar.—I don't have the details regarding composition and personnel. But by virtue of the powers vested under Country and Town Planning Authority the Vijayanagar Steel Authority has been created by a gazette notification in May, 1972.

ಶ್ರೀ ಎಂ.ಎಸ್. ಕೃಷ್ಣನ್.—ಈ ಉಕ್ಕು ಕಾರ್ಖಾನೆ ಸ್ಥಾಪನೆ ಆಗುವವರೆಗೂ ಈ ಪ್ರಾಧಿಕಾರ ಇರುತ್ತದೆ. ಆ ನಂತರ ಅದು ಇರುವುದಿಲ್ಲ. ಆದ್ದರಿಂದ ಈ ಅಥಾರಿಟಿಗೆ ಜವಾಬ್ದಾರಿಯನ್ನು ಕೊಡುವ ಬದಲು ಅದನ್ನು ಬಳ್ಳಾರಿಯಲ್ಲಿನ ಟ್ರಸ್ಟ್ ಬೋರ್ಡಿಗೆ ವಹಿಸಿಕೊಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

Sri A. Lakshmisagar.—This is a suggestion which can be considered.